



ಉಡುಪು ತೀರಾ ಸರಳ, ಅನೌಪಚಾರಿಕ ಹಾಗೂ ನಿರಾಡಂಬರದಿಂದ ಕೂಡಿತ್ತು. ಕಾಮರಾಜ್‌ರಿಂದ ನನಗೆ ಅರಿವಾದುದು, ಮನುಷ್ಯನ ಉಡುಪಿಗೂ, ಸ್ಥಾನಮಾನಕ್ಕೂ ಅನಾವಶ್ಯಕವಾಗಿ ಸಂಬಂಧ ಕಲ್ಪಿಸುವುದು ಯೋಗ್ಯವಲ್ಲ ಎಂದು.

ತಮಿಳುನಾಡಿನಲ್ಲಿ ಪಂಚೆ ಧರಿಸುವುದು ಸಾಮಾನ್ಯವಾದ ಉಡುಪಿನ ಮಾದರಿಯೇ. ಅಲ್ಲಿನ ಹವಾಮಾನಕ್ಕೆ ಅನುಗುಣವಾಗಿಯೋ ಏನೋ ಇಂದಿಗೂ ಅತಿ ಶ್ರೀಮಂತರಿಂದ ಸಾಮಾನ್ಯ ಜನರವರೆಗೆ, ಪಂಚೆ ಎನ್ನುವುದು ಅನಧಿಕೃತ ಯೂನಿಫಾರಂ ರೀತಿಯೇ ಆಗಿದೆ. ಅದರ ಬಗ್ಗೆ ಅಲ್ಲಿಯ ಜನರಿಗೆ ಯಾವುದೇ ರೀತಿಯ ಸಂಕೋಚವಾಗಲೀ ಕೀಳರಿಮೆಯಾಗಲೀ ಕಂಡುಬರುವುದಿಲ್ಲ. ನಮ್ಮಲ್ಲಿಯೇ, ಪಂಚೆಯ ಉಡುಪು, ಸಾಮಾಜಿಕ ಅಂತಸ್ತಿನಲ್ಲಿ ಒಂದು ರೀತಿಯ ಕೀಳರಿಮೆ ಉಂಟುಮಾಡುವುದು ವಿಚಿತ್ರ ಎನಿಸುತ್ತದೆ. ಸಮರ್ಪಕವಾಗಿ ಧರಿಸಿದ್ದೇ ಆದರೆ, ಸರಳತೆಯಲ್ಲಿ ಪಂಚೆಯಷ್ಟು ಸಭ್ಯ ಉಡುಪು ಮತ್ತೊಂದಿಲ್ಲ.

ಆ ದಿನಗಳಲ್ಲಿ ಕಾಮರಾಜ್ ಅವರೊಂದಿಗೆ ಪಂಚೆ ಧರಿಸಿಕೊಂಡೇ ಹೊರಗಡೆಯೂ ಕಾಣಿಸಿಕೊಳ್ಳುತ್ತಿದ್ದ ಮತ್ತೊಬ್ಬ ವ್ಯಕ್ತಿ ನಮ್ಮ ಕನ್ನಡದ ಮೇರುನಟ ರಾಜಕುಮಾರ್ ಅವರು. ಕೊನೆಯವರೆಗೂ ಅವರು ಎಲ್ಲಾ ಕಡೆಯೂ ತಮ್ಮ ಎಂದಿನ ಪಂಚೆ ಉಡುಪಿನಲ್ಲೇ ಕಾಣಿಸಿಕೊಳ್ಳುತ್ತಿದ್ದರು.

ಒಮ್ಮೆ ತಮಿಳುನಾಡಿನ ಐಷಾರಾಮಿ ಹೋಟೆಲೊಂದರಲ್ಲಿ ಪಂಚೆ ಧರಿಸಿ ಬಂದ ಓರ್ವ ವ್ಯಕ್ತಿಗೆ, ಪ್ರವೇಶವನ್ನು ನಿರಾಕರಿಸಿದ್ದ ಸುದ್ದಿ ಸಾಕಷ್ಟು ವಿವಾದವನ್ನು ಸೃಷ್ಟಿಸಿತ್ತು. ಅಲ್ಲಿನ ರಾಜಕೀಯ ಧುರೀಣರು, ಪಂಚೆಯೆನ್ನುವುದು ನಮ್ಮಲ್ಲಿ ತಮಿಳು ಸಂಸ್ಕೃತಿಯ ಸಂಕೇತ, ಅದನ್ನು ಅವಮಾನಿಸಿದವರಿಗೆ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದ್ದರು.

ಉತ್ತರ ಭಾರತದಲ್ಲಿಯೂ ಗ್ರಾಮೀಣ ಜನರಿಗೆ ಪಂಚೆ, ಅದರಲ್ಲೂ ಕಚ್ಚೆ ಪಂಚೆಯೇ ಬಹಳ ಒಪ್ಪಿತವಾದ ಉಡುಪು ಎನ್ನುವುದನ್ನು ಗಮನಿಸಿರುವೆ. ಉತ್ತರದವರಾಗಲೀ ದಕ್ಷಿಣದವರಾಗಲೀ ಈ ಪಂಚೆ ಎಂಬ ಸರಳ ಉಡುಪಿಗೆ ಯಾವುದೇ ಭೇದಭಾವವಿಲ್ಲ. ಅವರ ವೃತ್ತಿ ಹಾಗೂ ಸಂಬಂಧಿತ ಕಾರ್ಯಗಳಿಗೆ ಪಂಚೆಯ ಉಡುಪು ಅನುಕೂಲಕರ ಹಾಗೂ ಸುಲಭ ನಿರ್ವಹಣೆಗೆ ಯೋಗ್ಯವಾದುದು. ಆಗಿನ ದಿನಗಳಲ್ಲಿ ಪಂಚೆ ಎಂಬ ಹತ್ತಿಯ ಉಡುಪು ಬಹಳ ಕಡಿಮೆ ಬೆಲೆಯುಳ್ಳದ್ದಾಗಿತ್ತು. ಕಾಲಕ್ರಮೇಣ ಹತ್ತಿಯ ಬೆಲೆಯೂ ಏರಿಕೆ ಕಂಡು, ಈಗ ಇತರ ಬಟ್ಟೆ ಉಡುಪಿನಷ್ಟೇ ಹತ್ತಿಯ ಪಂಚೆ ಕೂಡಾ ದುಬಾರಿ.

ಕಚ್ಚೆ ಪಂಚೆಯನ್ನು ಧರಿಸುವುದು ಒಂದು ರೀತಿಯ ಸಾಹಸವೇ ಸರಿ. ಸದಾ ಅದನ್ನು ಉಡುವವರು ಬಹಳ ಸುಲಭವಾಗಿ ಕಚ್ಚೆಯ ರೀತಿಯಲ್ಲಿ ಉಡಬಲ್ಲರು. ಆದರೆ, ಈ ಸೌಲಭ್ಯ ಎಲ್ಲರಿಗೂ ದಕ್ಕುವುದಿಲ್ಲ. ಕಚ್ಚೆ ಪಂಚೆಯನ್ನು ಧರಿಸುವುದು, ಧರಿಸುವುದನ್ನು ಹೇಳಿಕೊಡುವುದು – ಎರಡೂ ತ್ರಾಸದಾಯಕವೇ ಸರಿ. ಯಾವ ಪದರ ಮೇಲೆ, ಯಾವ ಪದರ ಒಳಗೆ ಬರುವಂತೆ ಮಡಿಸಿ ಧರಿಸುವುದು ಸಾಕಷ್ಟು ಸಮಯವನ್ನು ಬೇಡುತ್ತದೆ. ಆ ಕಾರಣದಿಂದಲೇ ಹೆಚ್ಚು ಶ್ರಮವಿಲ್ಲದ ದಟ್ಟಿ ಪಂಚೆಯನ್ನು ಉಟ್ಟುಕೊಳ್ಳುವುದು ಅತ್ಯಂತ ಕ್ಷೇಮಕರ. ಈ ನಿಟ್ಟಿನಲ್ಲಿ ನನಗೆ ತಕ್ಷಣ ನೆನಪಿಗೆ ಬರುವುದು ನಮ್ಮ ಹೆಮ್ಮೆಯ ಡಾ. ಎಚ್. ನರಸಿಂಹಯ್ಯನವರ ಉಡುಪು. ಅವರು ಸದಾ ಶುಭ್ರ ಖಾದಿ ಷರಟು, ದಟ್ಟಿ ಪಂಚೆಯಲ್ಲಿಯೇ ಜೀವಮಾನವನ್ನು ಕಳೆದು ಎಲ್ಲರಿಗೂ ಮಾರ್ಗದರ್ಶಿಯಾದವರು. ವಿಶ್ವವಿದ್ಯಾನಿಲಯದ ಕುಲಪತಿಯಾದರೂ ತಮ್ಮ ಸರಳ ಉಡುಪನ್ನು ಬಿಟ್ಟುಕೊಟ್ಟಿರಲಿಲ್ಲ. ಉನ್ನತ ಶಿಕ್ಷಣಕ್ಕಾಗಿ ಅವರು ವಿದೇಶಕ್ಕೆ ಹೋಗುವಾಗ, ಅವರನ್ನು ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ಹೋದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಅವರ ದಟ್ಟಿ ಪಂಚೆ ಉಡುಪನ್ನು ಕಂಡು ಅಚ್ಚರಿಪಟ್ಟಿದ್ದರಂತೆ.

ಇತ್ತೀಚಿನ ದಿನಗಳಲ್ಲಿ ವೃತ್ತಿ, ಸಾಮಾಜಿಕ ಅಂತಸ್ತಿನ ಭೇದ ಇಲ್ಲದೆ ಪಂಚೆ ಉಡುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಇಂದಿನ ಪಂಚೆಪ್ರಿಯರಿಗೆ ಮನೆಯೊಳಗೆ ಅಥವಾ ಹೊರಗಿನ ಚಟುವಟಿಕೆಗೆ, ನಿರಾಯಾಸವಾದ ನಡಿಗೆಗೆ ಪಂಚೆ ತೊಡಕು ಅನ್ನಿಸುತ್ತಿಲ್ಲ. ಆಧುನಿಕ ಸಂದರ್ಭದಲ್ಲೂ ಪಂಚೆ ತನ್ನ ವರ್ಚಸ್ಸನ್ನು ಕಳೆದುಕೊಂಡಿಲ್ಲ. ವಿವಿಧ ಬಣ್ಣ, ಮಾದರಿಗಳಲ್ಲಿ ಆಧುನಿಕ ಸ್ಪರ್ಶ ಪಡೆದುಕೊಳ್ಳುತ್ತಿದೆ. ಪರ್ಸು ಹಾಗೂ ಮೊಬೈಲ್ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಜೇಬುಳ್ಳ ಪಂಚೆಗಳೂ ಪೇಟೆಯಲ್ಲಿ ಲಭ್ಯ. ಈ ಸೌಲಭ್ಯವನ್ನು ಗ್ರಾಹಕಸ್ನೇಹಿ ವಿಧಾನ ಮಾತ್ರವಲ್ಲದೆ, ಪಂಚೆಯ ಬೆಳವಣಿಗೆ ಹಾಗೂ ಹೊಸ ಆವಿಷ್ಕಾರದಂತೆಯೂ ಕಾಣಬಹುದಾಗಿದೆ.

ದೇಶದೆಲ್ಲೆಡೆ ಜನರು ಪಂಚೆಯನ್ನು ಒಂದಲ್ಲಾ ಒಂದು ಬಗೆಯಲ್ಲಿ ಧರಿಸುತ್ತಾರೆ. ಹಾಗಾಗಿ ಈ ಸರಳ ಸುಂದರ ಪಂಚೆಯನ್ನು ಭಾರತದ ರಾಷ್ಟ್ರೀಯ ಉಡುಪಾಗಿ ಯಾಕೆ ಘೋಷಿಸಬಾರದು?

**ಪ್ರತಿಕ್ರಿಯಿಸಿ: feedback@sudha.co.in**